# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಬಿ ಗಂಗಾಧರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುವತ್ತಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ಜಿಎಲ್‌ಬಿ–2778/2014/ಡಿಆರ್‌ಇ–5, ದಿನಾಂಕ:10–03–2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 28.02.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಈ ದೂರನ್ನು ಮೂಲೆ ಮನೆ ಬಸಪ್ಪ ತಂದೆ ದಿ.ಮೂಲೆಮನೆ ಉಜ್ಜಪ್ಪ, 01 ನೇ ವಾರ್ಡ್ ಭುಜಂಗನಗರ ಪೋ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಬಿ ಗಂಗಾಧರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುವತ್ತಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.

2) ದೂರುದಾರರು ತಮ್ಮ ದೂರಿನಲ್ಲಿ ಭುಜಂಗನಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 1 ರಲ್ಲಿರುವ ಆಸ್ತಿ ನಂ:29/ಎ ಇದು ನನ್ನ ತಾತ ಮೂಲೆ ಮನೆ ಸಿದ್ದಪ್ಪ ಇವರ ಹೆಸರಿನಲ್ಲಿತ್ತು ನನ್ನ ಭಾಗಕ್ಕೆ ಬಂದ ಮನೆ ಅವರ ಹೆಂಡತಿ ಪಾರ್ವತಮ್ಮನ ಹೆಸರಿನಲ್ಲಿತ್ತು ನನ್ನ ಅಣ್ಣ ಮರಳಪ್ಪನ ಪಾಲಿನ ಜಾಗವನ್ನು ನಾನೇ ಖರೀದಿ ಮಾಡಿದ್ದೆ ಆದರೆ ಯಾವುದೇ ದಾಖಲೆ ಬರೆದುಕೊಟ್ಟಿರಲಿಲ್ಲ ನನ್ನ ಮಗ ಮಂಜುನಾಥ 20 ರೂಗಳ ಸ್ಟ್ಯಾಂಪ್ ಪೇಪರ್ ಮೇಲೆ ಸ್ತಿರಾಸ್ತಿ ಹಕ್ಕು ಪತ್ರಗಳನ್ನ ಸೃಷ್ಟಿ ಮಾಡಿಕೊಂಡಿದ್ದಾನೆ. ಇದಲ್ಲದೆ 50 ರೂಗಳ ಸ್ಟ್ಯಾಂಪ್ ಮೇಲೆ ನನ್ನ ಹೆಂಡತಿ ಪಾವರ್ತಮ್ಮ ಉಚಿತಾರ್ಥ ದಾನ ಪತ್ರವನ್ನು ಬರೆದುಕೊಟ್ಟಿದ್ದಾರೆಂದು ದಾಖಲೆ ಸೃಷ್ಟಿ ಮಾಡಿ ನೋದಣಿಯಾಗದೆ ಇರುವ ದಸ್ತಾವೇಜಿನ ಆಧಾರದ ಮೇಲೆ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದಾನೆ. ಸರ್ಕಾರಿ ಯೋಜನೆಯಲ್ಲಿ ನಿನ್ನ ಹೆಂಡತಿಗೆ ಮನೆ ನಿರ್ಮಿಸಲು ದುಡ್ಡು ಕೊಟ್ಟಿದ್ದೇವೆ ಅದಕ್ಕೆ ಒಪ್ಪಿಗೆ ಸಹಿ ಬೇಕಾಗಿದೆ ಅಂತ ಹೇಳಿ ಗ್ರಾಮ ಮಂಚಾಯ್ತಿಯಲ್ಲಿ ನನ್ನ ಸಹಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಎದರುದಾರರ ಮೇಲೆ ಕಾನೂನು ಕ್ರಮ ಕೈಗೊಳ್ಳಲಯ ಕೋರುತ್ತಾರೆ.

3) ಈ ದೂರಿನ ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ. ಬಿ. ಗಂಗಾಧರ ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಕ್ಷೇಪಣೆಗಳನ್ನು ಸಲ್ಲಿಸಿದ್ದು ದಿ: 23.04.2012 ರಲ್ಲಿ ಎಸ್, ಹೆಚ್ ತಾಯಪ್ಪ ಇವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆದಿದ್ದು ಶ್ರೀಮತಿ ಪಾರ್ವತಮ್ಮ ಮತ್ತು ಅವರ ಮಗ ಮಂಜುನಾಥ ರವರು ಹಾಜರಿರುವಾಗ ವಸತಿ ಯೋಜನೆಲಡಿಯಲ್ಲಿ ನಿರ್ಮಿಸಿಕೊಂಡಿರುವ ಮನೆಯನ್ನು ಮಗನ ಹೆಸರಿಗೆ ದಾನ ಪತ್ರ ಮಾಡಿ ತನ್ನ ಮಗನಿಗೆ ಕೊಟ್ಟಿದ್ದೇನೆ ಅಂತ ಹೇಳಿದರೂ, ನನ್ನ ಗಂಡ ಮೂಲೆ ಮನೆ ಬಸಪ್ಪ ಬೇಜವಾಬ್ದಾರಿ ಮನುಷ್ಯನಾಗಿದ್ದು ನನ್ನನ್ನು ಮತ್ತು ಮಕ್ಕಳನ್ನು ಪೋಷಿಸುತ್ತಿಲ್ಲ ಅಂತ ಹೇಳಿದರು ಪಂಚಾಯ್ತಿಯ ಮುಂದೆ ದೂರುದಾರರು ತನ್ನ ಹೆಂಡತಿಗೆ ಹೊಡೆಯಲು ಹೋಗಿದ್ದರು ಆಡಳಿತ ಮಂಡಳಿಯು ಇದನ್ನು ಆಕ್ಷೇಪಿಸಿತು ನಂತರ 7 ದಿನಗಳು ನೋಟೀಸು ಜಾರಿ ಮಾಡಿ

ಯಾವುದೇ ತಕರಾರರುಗಳು ಬರದೇ ಇದ್ದುದ್ದರಿಂದ ಮಂಜುನಾಥ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿದೆ. ಆದ್ದರಿಂದ ದೂರನ್ನು ಕೈಬಿಡುವಂತೆ ಕೋರಿಕೊಂಡಿದ್ದಾರೆ.

4) ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದಿ:23.02.2015ರಂದು ನನ್ನ ಹಿಂದಿನ ಅಧಿಕಾರಿಯು ಅಂತಿಮ ಪರಿಶೀಲನಾ ಟಿಪ್ಪಣಿ ಮಂಡಿಸಿದ್ದು, ಮಾನ್ಯರು ಗ್ರಾಮ ಪಂಚಾಯ್ತಿಯಿಂದ ಖಾತಾ ಬದಲಾವಣೆ ಯಾವ ಆಧಾರದ ಮೇಲೆ ಆಗಿದೆ. ನೋಂದಾಯಿಡವಲ್ಲದ ದಸ್ತಾವೇಜಿನ ಮೇಲೆ ಹೇಗೆ ಆಯಿತು ಎನ್ನುವ ಬಗ್ಗೆ ವರದಿ ತರಿಸಲು ಆದೇಶಿಸಿದ್ದು, ಈ ಬಗ್ಗೆ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಂದ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ. ದಾಖಲೆಗಳನ್ನು ಪರಿಶೀಲಿಸಿದ ನಂತರ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಭುಜಂಗನಗರ ಗ್ರಾಮ ಪಂಚಾಯಿತಿಯ ನೋಡೆಲ್ ಅಧಿಕಾರಿಗಳು (ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸಂಡೂರು) ಅವರು ಪರಿಶೀಲಿಸಿ, ಮೂಲೆ ಮನೆ ಬಸಪ್ಪ ಇವರಿಗೆ 7 ಜನ ಮಕ್ಕಳಿದ್ದಾರೆ. ಉಳಿದ 6 ಮಕ್ಕಳ ಅನುಮತಿಯನ್ನು ಪಡೆದಿಲ್ಲ ದಿ: 29.03.2012 ರಂದು ಮಂಜುನಾಥ ಎನ್ನುವ ಹಿರಿಯ ಮಗ ಖಾತೆ ಬದಲಾವಣೆ ಅರ್ಜಿ ಸಲ್ಲಿಸಿದ್ದಾರೆ. ದಿ:23.04.2012 ರಂದು ಗ್ರಾಮ ಪಂಚಾಯಿತಿಯ ಕಾರ್ಯಾಲಯದಲ್ಲಿ ಸಮಾನ್ಯ ಸಭೆ ನಡೆದಿದ್ದು, ಠರಾವು ಪುಸ್ತಕದಲ್ಲಿ ಈ ವಿಷಯ ನಮೂದಿಸುವಾಗ ಕ್ರಮ ಸಂ.3 ರ ನಂತರ 4 ಎಂದು ನಮೂದಿಸಬೇಕಾದ ಸ್ಥಳದಲ್ಲಿ ಒಂದು ಲೇಖನಿಯಿಂದ 3 ಎ ಎಂದು ಬರೆದು ಮತ್ತೊಂದು ಲೇಖನಿಯಿಂದ ಠರಾವು ಬರೆಯಲಾಗಿದೆಯೆಂದು ವರದಿ ಸಲ್ಲಿಸಿದ್ದಾರೆ.

6) ಈ ಠರಾವು ಪುಸ್ತಕದ ಪ್ರತಿಯನ್ನು ಗಮನಿಸಲಾಗಿ, ಸ್ಥಳಾವಕಾಶ ಕಡಿಮೆ ಇದ್ದುದರಿಂದ ಚಿಕ್ಕದಾಗಿ ಬರೆದು ಮಧ್ಯದಲ್ಲಿ ಠರಾವು ಸೇರಿಸಿರುವಂತೆ ತೋರುತ್ತದೆ. ಇದೂ ಅಲ್ಲದೆ ಆ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಭೆಗೆ ನೋಂದಾಯಿತವಲ್ಲದ ದಸ್ತಾವೇಜುಗಳನ್ನು ಹಾಜರುಪಡಸಲಾಗಿದೆ. ಸದರಿ ನೋಂದಾಯಿತವಲ್ಲದ ದಸ್ತಾವೇಜುಗಳ ಆಧಾರದ ಮೇಲೆ ಆ ರೀತಿ ಹಕ್ಕು ಬದಲಾವಣೆ ಮಾಡಲು ಬರುವುದಿಲ್ಲವೆಂದು ಕಾನೂನಿನ ಅಂಶವನ್ನೂ ಸಭೆಗೆ ತಿಳಿಸಿಲ್ಲ. ಆದ್ದರಿಂದ ಎದುರುದಾರರು ಕರ್ತವ್ಯಲೋಪವನ್ನು ಎಸಗಿದ್ದಾರೆನ್ನಲು ಸಾಕಷ್ಟು ಆಧಾರಗಳಿವೆ.

7) ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು, 1966 ರ ನಿಯಮ 3 ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಬಿ ಗಂಗಾಧರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುವತ್ತಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (i) (ii) ಮತ್ತು (iii) ರಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,

ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/232/ಗ್ರಾಪಂಕಾ/2017 ಬೆಂಗಳೂರು, ದಿನಾಂಕ- 30-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ ಗಂಗಾಧರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುವತ್ತಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 56).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಶ್ರೀ ಬಿ ಗಂಗಾಧರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುವತ್ತಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.